**(ದಿನಾಂಕಃ 04-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ವಾಟೀಸವಾಲು : ವಾದಿ ಪರ ಶ್ರೀ. ಕೆ ಬಿ ಕೆ ವಕೀಲರಿಂದ -**

ನಾನು 9 ನೇ ತರಗತಿಯ ತನಕ ಓದಿರುತ್ತೇನೆ . ಸದರಿ ಕೇಸನ್ನು ಶರೀಫಾ ಇವರು ಕೋಳಿ ಇವರ ಮೇಲೆ ಹಾಕಿರುತ್ತಾರೆ. ಯಾವ ಸರ್ವೆ ನಂಬರದ ಮೇಲೆ ದಾವೆ ಹಾಕಿರುತ್ತಾರೆಂದು ನನಗೆ ಹೇಳಲು ಬರುವುದಿಲ್ಲ. ನಮ್ಮ ಪ್ಲಾಟ ನಂಬರ 4335/ಎ ಇರುತ್ತದೆ. ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ಅದನ್ನು ಪೂರ್ಣ ಓದಿ ಸಹಿ ಮಾಡಿರುತ್ತೇನೆ. ಶರೀಪಾ ಹಾಕಿದ ವಾದಪತ್ರವನ್ನು ನಾನು ಓದಿ ನೋಡಿಲ್ಲ. ಅದನ್ನು ಓದಲು ನನಗೆ ಯಾವ ಅಡಚಣೆ ಇರಲಿಲ್ಲ. ಸರ್ವೆ ನಂ. 118ಅ/2 ಎಷ್ಟು ಎಕರೆ ಇರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನನಗೆ ಎರಡು ಪ್ಲಾಟಗಳು ಇರುತ್ತವೆ. ಅದರಲ್ಲಿ 7 ಎಕರೆ 21 ಗುಂಟೆ ಜಮೀನು ಇದೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಸರ್ವೆ ನಂಬರದ ಮೂಲ ಮಾಲೀಕರು ಮೊಹಮ್ಮದ ಶಪಿ ನದಾಪ. ಸದರಿ ಸರ್ವೆ ನಂಬರನಲ್ಲಿ ಎಷ್ಟು ಎಕರೆ ಎನ್ ಎ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಆತನು ತನ್ನ ಜಮೀನಿನ ಪೂರ್ವ ಬಾಜು ಎಷ್ಟು ಎಕರೆ ಎನ್ ಎ ಮಾಡಿದ್ದ ಎಂದು ನನಗೆ ಹೇಳಲು ಬರುವುದಿಲ್ಲ. ಆತನು ಎರಡು ಎಕರೆ ಎನ್ ಎ ಮಾಡಿದ್ದನು. ಅದರ ಸಿ ಟಿ ಎಸ್ ನಂ. 4335 ನಂಬರ ಕೊಟ್ಟಿದ್ದರು ಎಂದರೆ ನಿಜ. ಅದರಲ್ಲಿ 1 ರಿಂದ 47 ಪ್ಲಾಟ ಆಗಿದ್ದವು ಎಂದರೆ ನಿಜ . ಅದರ ಪಕ್ಕಕ್ಕೆ ಪಶ್ಚಿಮಕ್ಕೆ 30 ಗುಂಟೆ ಖಾಲಿ ಜಮೀನು ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ನಮಗೆ ಸೇರಿದ 2 ಪ್ಲಾಟಗಳು, ಅವುಗಳ ತಲಾ ಕ್ಷೇತ್ರ 45 ಅಡಿ *36 ಅಡಿ ಇತ್ತು ಎಂದು ಹೇಳುತ್ತಾರೆ. ವಾದಿಯು ಹಾಜರು ಮಾಡಿದ ಕಾಗದ ಪತ್ರಗಳನ್ನು ನೋಡಿಲ್ಲ. ಸದರಿ ಕಾಗದ ಪತ್ರಗಳನ್ನು ನೋಡಲು ನನಗೆ ಯಾವುದೇ ಅಡಚಣೆ ಇರಲಿಲ್ಲ ಎಂದರೆ ನಿಜ. ಈಗ ಸರ್ವೆ ನಂ. 118ಅ/2 ಕ್ಷೇತ್ರ 30 ಗುಂಟೆ ಶರೀಪಾ ಮೊಹಮ್ಮ ದ ಶಪಿ ನದಾಪ ಇವರ ಹೆಸರಿನಲ್ಲಿ ನಿಪಿ.1 ಪಹಣಿ ಪತ್ರಿಕೆ ಇದೆ ಎಂದರೆ ನಿಜ. ಮೊಹಮ್ಮದ ಶಪಿ ಇವರು ಯಾವಾಗ ತೀರಿಕೊಂಡರು ನನಗೆ ಗೊತ್ತಿಲ್ಲ. 06-01-2004 ಮೊಹಮ್ಮದ ಶಪಿ ತೀರಿಕೊಂಡರು ಎಂದರೆ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ. ಆತ ಸತ್ತ ನಂತರ ವಾದಿಯು ವಾರಸಾ ಪ್ರಕಾರ 30 ಗುಂಟೆ ತನ್ನ ಹೆಸರಿಗೆ ಮಾಡಿಕೊಂಡಳು ಎಂದರೆ ಸಾಕ್ಷಿ ನಾನು ಶಪಿ ಬದುಕಿದ್ದಾಗ 1999 ರಲ್ಲಿ ಎರಡು ಪ್ಲಾಟಗಳನ್ನು ಅಬ್ದುಲ ಖಾದರ ಮೀರಾಸಾಬ ಬಡಗಾವಿ ಇವರ ಕಡೆಯಿಂದ ಸದರಿ ಪ್ಲಾಟಗಳನ್ನು ಖರೀದಿ ಮಾಡಿರುತ್ತೇವೆ.

2. ಶರೀಪಾ ಸರ್ವೆ ನಂ. 118ಅ/2 ಪೂರಾ ಜಮೀನನ್ನು ಅಳತೆ ಮಾಡಲು ದಿಃ 21-11-2015 ರಂದು ಹಾಕಿದ್ದಳು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ಇಲಾಖೆಯಿಂದ ಅಳತೆ ಆದ ನಂತರ ಪಿ ಟಿ ಶೀಟ ತಯಾರು ಮಾಡಿ ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ.30 ಗುಂಟೆ ಹೊರತು ಪಡಿಸಿ ಉಳಿದ ಜಾಗದಲ್ಲಿ ಎರಡು ಎಕರೆ ಜಾಗವನ್ನು ಮೊಹಮ್ಮದ ಶಪಿ ಎನ್ ಎ ಮಾಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಎರಡು ಎಕರೆ ಜಾಗಕ್ಕೆ ಸಿ ಟಿ ಎಸ್ ನಂ. 4335/ಎ ಎಂದು ನಂಬರ ಕೊಟ್ಟಿದ್ದರು ಎಂದರೆ

ನನಗೆ ಗೊತ್ತಿಲ್ಲ. ಸಾಕ್ಷಿ ನಮ್ಮ ಪ್ಲಾಟಗೆ ಸಿ ಟಿ ಎಸ್ ನಂ. 4335/ಎ ಎಂದು ನಂಬರ ಕೊಟ್ಟಿದ್ದಾಗಿ ಹೇಳುತ್ತಾರೆ. ಸಿ ಟಿ ಎಸ್ ನಂ. 4335/ಎ ಎರಡು ಎಕರೆಯಲ್ಲಿ ಪ್ಲಾಟ ನಂ. 47 ರಿಂದ 61 ವರೆಗೆ ಬಂದಿರುತ್ತದೆ. ನಾವು ಖರೀದಿ ಮಾಡಿದಾ ಗ ಸದರಿ ಉತಾರದಲ್ಲಿ ಸಿ ಟಿ ಎಸ್ ನಂ. 4335/ಎ ರಲ್ಲಿ ಈ ಪ್ಲಾ ಟಗಳು ಬಂದಿದ್ದಾ ಗಿ ನಮೂದು ಇರುತ್ತದೆ.

3. ನಾನು ಪ್ಲಾಟಗಳನ್ನು ಖರೀದಿ ಮಾಡುವಾಗ ಸಿ ಟಿ ಎಸ್ ಉತಾರ, ನೋಂದಣಿ ಪತ್ರ ನೋಡಿರುತ್ತೇನೆ. ಇವುಗಳನ್ನು ಹೊರತುಪಡಿಸಿ ಬೇರೆ ದಾಖಲೆ ನೋಡಿಲ್ಲ. ಎನ್ ಎ ಆದ ಕಾಪಿ ಹಾಗೂ ಆರ್ಡರ ಕಾಪಿಯನ್ನು ಹಾಗೂ ಜಮೀನಿನ ಉತಾರವನ್ನು ನಾನು ನೋಡಿಲ್ಲ. ಖರೀದಿ ತೆಗೆದುಕೊಂಡಂತಹ ದಾಖಲೆಗಳನ್ನು ನ್ಯಾ ಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

**ಮುಂದುವರೆದ ವಾಟಿ ಸವಾಲು : ವಾದಿ ಪರ ವಕೀಲರ ಕೋರಿಕೇಯ ಮೇರೆಗೆ ಮುಂದೂಡಲಾಯಿತು**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

**(ಆದಿತ್ಯ ಆರ್. ಕಲಾಲ್)**
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**